# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು–570 006

ಸಂಖ್ಯೆ : ಕರಾಮುವಿ/ಆರ್‌ಪಿಎ/ /2018-19 ದಿನಾಂಕ : 01.10.2018

ಗೆ,

ಎಲ್ಲಾ ಗೌರವ ಪತ್ರಿಕೆ/ಮಾಧ್ಯಮ ಪ್ರತಿನಿಧಿಗಳು
ಮೈಸೂರು ಜಿಲ್ಲಾ ಪತ್ರಕರ್ತರ ಸಂಘ
ಮೈಸೂರು

ಮಾನ್ಯರೆ,

ವಿಷಯ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರವೇಶಾತಿ ದಿನಾಂಕದ ಅವಧಿಯನ್ನು ವಿಸ್ತರಿಸಿರುವ ಬಗ್ಗೆ.

* * * * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2018-19ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ ಯು.ಜಿ.ಸಿ.ಯಿಂದ ಮಾನ್ಯತೆ ದೊರೆತ ಕೋರ್ಸ್‌ಗಳಿಗೆ ದಂಡ ಶುಲ್ಕದೊಂದಿಗಿನ ಪ್ರವೇಶಾತಿಯ ಅಂತಿಮ ದಿನಾಂಕವನ್ನು 01.10.2018 ರಿಂದ ದಿನಾಂಕ: 20.10.2018ರವರೆಗೆ ವಿಸ್ತರಿಸಿರುವ ಬಗ್ಗೆ ಮಾಹಿತಿಯನ್ನು (ಪ್ರತಿ ಲಗತ್ತಿಸಿದೆ) ತಮ್ಮ ಪತ್ರಿಕೆ/ಮಾಧ್ಯಮದಲ್ಲಿ ಉಚಿತವಾಗಿ ಪ್ರಕಟಿಸಿ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯಲು ಸಹಕರಿಸುವಂತೆ ಈ ಮೂಲಕ ಕೋರಲಾಗಿದೆ.

ಗೌರವಗಳೊಡನೆ,

ತಮ್ಮ ವಿಶ್ವಾಸಿ,

1/10/18

ಕುಲಸಚಿವ

ಕುಲಸಚಿವ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು ೫೭೦ ೦೦೬.

Scanned by CamScanner

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು-570 006

ಸಂಖ್ಯೆ : ಕರಾಮುವಿ/ಆರ್‌ಪಿಎ/51/2018-19 ದಿನಾಂಕ : 01.10.2018

## ಪ್ರವೇಶಾತಿ ಅವಧಿ ವಿಸ್ತರಣೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2018-19ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ ಯು.ಜಿ.ಸಿ.ಯಿಂದ ಮಾನ್ಯತೆ ದೊರೆತಿರುವ ಎಲ್ಲ ಕೋರ್ಸ್‌ಗಳಿಗೆ ಈಗಾಗಲೇ ಪ್ರವೇಶಾತಿಯನ್ನು ಪ್ರಾರಂಭಿಸಿದ್ದು, ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿ ಹಾಗೂ ತನ್ನ ಎಲ್ಲಾ ಪ್ರಾದೇಶಿಕ ಕೇಂದ್ರಗಳಲ್ಲಿ ಪ್ರವೇಶಾತಿ ಪ್ರಕ್ರಿಯೆಗಳು ನಡೆಯುತ್ತಲಿದ್ದು, ಪ್ರವೇಶಾತಿಯ ಅಂತಿಮ ದಿನಾಂಕವನ್ನು ದಂಡ ಶುಲ್ಕದೊಂದಿಗೆ ದಿನಾಂಕ : 01.10.2018 ಎಂದು ನಿಗದಿಗೊಳಿಸಲಾಗಿತ್ತು. ಆದರೆ, ವಿಶ್ವವಿದ್ಯಾನಿಲಯಕ್ಕೆ ವಿದ್ಯಾರ್ಥಿಗಳು ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಕೋರಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿರುವುದರಿಂದ ಮಾನ್ಯ ಕುಲಪತಿಗಳು ಯು.ಜಿ.ಸಿ., ನವದೆಹಲಿ, ಇಲ್ಲಿಗೆ ದಿನಾಂಕ : 15.09.2018ರಂದು ಪತ್ರ ಮುಖೇನ ಪ್ರವೇಶಾತಿಯ ದಿನಾಂಕವನ್ನು ವಿಸ್ತರಿಸಿಕೊಡುವಂತೆ ಅನುಮತಿ ಕೋರಿದ ಹಿನ್ನೆಲೆಯಲ್ಲಿ, ಯು.ಜಿ.ಸಿ., ನವದೆಹಲಿ, ಇವರು ತಮ್ಮ ಪತ್ರ ಸಂಖ್ಯೆ : F.No. 1-6/2018 (DEB-I) ದಿನಾಂಕ : 01.10.2018 ರಲ್ಲಿ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಪ್ರವೇಶಾತಿ ದಿನಾಂಕವನ್ನು 20.10.2018ರವರೆಗೆ ವಿಸ್ತರಿಸಿ, ಪ್ರವೇಶಾತಿಗೆ ಅನುಕೂಲ ಮಾಡಿಕೊಟ್ಟಿರುತ್ತದೆ.

ಆದುದರಿಂದ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿಯಾದ ಮುಕ್ತಗಂಗೋತ್ರಿ, ಮೈಸೂರು, ಇಲ್ಲಿ ಹಾಗೂ ಎಲ್ಲಾ ಪ್ರಾದೇಶಿಕ ಕೇಂದ್ರಗಳಲ್ಲಿ ದಂಡ ಶುಲ್ಕದೊಡನೆ ಎಲ್ಲಾ ಸರ್ಕಾರಿ ರಜೆ ಮತ್ತು ಭಾನುವಾರವೂ ಸೇರಿದಂತೆ ದಿನಾಂಕ : 20.10.2018ರವರೆಗೆ ಪ್ರವೇಶಾತಿ ಪಡೆದುಕೊಳ್ಳಬಹುದೆಂದು ತಿಳಿಸಲಾಗಿದೆ.

1/10/18

ಕುಲಸಚಿವ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು ೫೭೦ ೦೦೬.

Scanned by CamScanner